ಎನ್ನುವ ಇನ್ನೊಂದು ವಿದ್ಯೆಯನ್ನು ಕಲಿತವರಲ್ಲ. ಅಥವಾ ಕೆಟ್ಟ ಚಾಲಕರು ಇದರಲ್ಲಿ ಮೊದಲ ವಿದ್ಯೆಯನ್ನು ಕಲಿತು ಎರಡನೇ ವಿದ್ಯೆಯನ್ನು ಕಲಿಯದೇ ಬಿಟ್ಟವರಲ್ಲ. ಬಸ್ ಚಾಲನೆಯನ್ನು ಕಲಿಯುವ ಕ್ರಮದಲ್ಲೇ, ಗಮನವಿಟ್ಟು ಕಲಿಯುವ, ಚಾಲನೆಯ ವಿವಿಧ ಅಂಶಗಳ ನಡುವಿನ ಸಂಬಂಧವನ್ನು ತಿಳಿದುಕೊಂಡು ಚಾಲನೆ ಮಾಡುವ, ಚಾಲನೆಯ ಹೊತ್ತಿನಲ್ಲಿ ನಮ್ಮ ದೈಹಿಕ ಮಾನಸಿಕ ಸೌಖ್ಯಕ್ಕೂ ಮತ್ತು ನಾವು ನಿಭಾಯಿಸಬಹುದಾದ ವೇಗಕ್ಕೂ ಒಂದು ಸಂಬಂಧವಿದೆ ಎಂದು ತಿಳಿದುಕೊಂಡು ಚಲಾಯಿಸುವ ಇವೇ ಮುಂತಾದ ಲಕ್ಷಣಗಳೇ ಒಳ್ಳೆಯ ಚಾಲಕರಿಗೂ ಕೆಟ್ಟ ಚಾಲಕರಿಗೂ ನಡುವೆ ಇರುವ ವ್ಯತ್ಯಾಸ. ಇದು ಶಿಕ್ಷಣಕ್ಕೂ ಅನ್ವಯಿಸುತ್ತದೆ.

### ಶಿಕ್ಷಣದ ಕ್ರಮ

ಶಿಕ್ಷಣ ಮೂಲಭೂತ ಲಕ್ಷಣಗಳಲ್ಲಿ ಒಂದು ಅದರ ಡಯಲೆಕ್ಟಿಕಲ್ ಸ್ವರೂಪ. ಅಂದರೆ, ಸಂವಾದದ ಸ್ವರೂಪ. ಮೊದಲನೆಯದಾಗಿ, ಕಲಿಸುವವರು ಮತ್ತು ಕಲಿಯುವವರ ನಡುವೆ ಒಂದು ಸಂವಾದ ಇರುತ್ತದೆ. ಕಲಿಯುವವರ ಮಿತಿಗಳು ಮತ್ತು ಸಾಧ್ಯತೆಗಳ ನೆರಳಿನಲ್ಲೇ ಕಲಿಸುವವರು ಕೆಲಸ ಮಾಡುತ್ತಿರುತ್ತಾರೆ. ಹಾಗೆಯೇ, ಕಲಿಸುವವರು ಮತ್ತು ಕಲಿಕೆಯ ಸಂಪ್ರದಾಯದ ನಡುವೆ ಒಂದು ಸಂವಾದ ಇರುತ್ತದೆ. ತಾವು ಕಲಿತ ರೀತಿಯ ಪ್ರಭಾವದ ಆಧಾರದ ಮೇಲೆಯೇ ಕಲಿಸುವವರು ಕಲಿಸುತ್ತಿರುತ್ತಾರೆ. ಅಧ್ಯಾಪಕರು ಕೇವಲ ಉಪನ್ಯಾಸ ಕೊಡುತ್ತಿದ್ದರೂ, ಅಥವಾ ವಿದ್ಯಾರ್ಥಿ ಕೇವಲ ಒಂದು ಪುಸ್ತಕದ ಮೂಲಕ ತಂತಾನೇ ಕಲಿಯುತ್ತಿದ್ದರೂ ಆಂತರ್ಯದಲ್ಲಿ ಕಲಿಕೆಗೆ ಈ ಸಂವಾದ ಸ್ವರೂಪ ಇದ್ದೇ ಇರುತ್ತದೆ. ಒಂದು ಉಪನ್ಯಾಸ ತನ್ನ ಕೇಳುಗರಿಗೆ ಎದುರಾಗಬಹುದಾದ ಪ್ರಶ್ನೆಗಳನ್ನು ತಾನೇ ಕೇಳಿಕೊಂಡು ಉತ್ತರಿಸುತ್ತಿರುತ್ತದೆ. ಒಬ್ಬ ವಿದ್ಯಾರ್ಥಿಗೆ ತನ್ನ ಪುಸ್ತಕದಲ್ಲಿರುವ ವಿಚಾರದ ಕುರಿತು ಮೂಡುವ ಪ್ರಶ್ನೆಯೇ ಕಲಿಕೆಯ ಮುಂದಿನ ಹಾದಿಯನ್ನು ನಿರ್ಧರಿಸುತ್ತದೆ. ಆದರೆ, ಹಲವಾರು ಕಾರಣಗಳಿಂದಾಗಿ, ಈ ಸಂವಾದ ಏರ್ಪಡದೇ ಹೋಗಬಹುದು. ಕಲಿಯುವವರ ಮಾನಸಿಕ ಬೌದ್ಧಿಕ ಪರಿಸ್ಥಿತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಕಲಿಸುವವರು ಕಲಿಸಬಹುದು. ಅಥವಾ ಕಲಿಯುವವರು ತಿಳುವಳಿಕೆಯನ್ನು ಪಡೆಯುವ ಬದಲಾಗಿ ಸದ್ಯದ ಯಾವುದೋ ಅಗತ್ಯಕ್ಕೆ, ಉದಾಹರಣೆಗೆ, ಪರೀಕ್ಷೆ ಪಾಸು ಮಾಡುವ ಏಕೈಕ ಅಗತ್ಯಕ್ಕೆ, ಕಲಿಯುತ್ತಿರಬಹುದು. ಹೀಗೆ ಯಾವುದೇ ಕಾರಣಕ್ಕೂ






# 'ನೋಡಿ' ಕಲಿ ಅಂದರೆ ಈಗ ಬರೀ ನೋಡುವುದು!

**ಪ್ರೀತಿ ನಾಗರಾಜ,** ಪತ್ರಕರ್ತೆ

'ನೋಡಿ ಕಲಿ, ಮಾಡಿ ತಿಳಿ' ಎನ್ನುವ ಮಾತು ಈಗಲೂ ಚಾಲ್ತಿಯಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ವೈಜ್ಞಾನಿಕ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುವ ಸಲುವಾಗಿ ಈ ಘೋಷವಾಕ್ಯ ಕೆಲವು ದಶಕಗಳ ಕಾಲ ಎಲ್ಲಾ ಪಠ್ಯಪುಸ್ತಕಗಳ ಮೇಲೆ ಕಾಣಸಿಗುತ್ತಿತ್ತು. ಒಬ್ಬರು ಪ್ರಯೋಗ ಮಾಡುವುದನ್ನು ನೋಡಿ ಕಲಿತು, ನಂತರ ಆ ಪ್ರಯೋಗವನ್ನು ತಾನೇ ಮಾಡಿ ತಿಳಿದುಕೋ ಎನ್ನುವುದು ಅದರ ಅರ್ಥ.

ಇಂದು 'ನೋಡಿ' ಕಲಿ ಅಂದರೆ ಒಂದು ಪರದೆಯನ್ನು ನೋಡಬಹುದಷ್ಟೇ. ಬದಲಾದ ಸನ್ನಿವೇಶ ನಮ್ಮ 'ನೋಡು'ವಿಕೆಯನ್ನೇ ಬದಲಾಯಿಸಿದೆ.

ಈವತ್ತು ನಾವು ನೋಡುತ್ತಿರುವ ದಿನಗಳನ್ನು ಮುಂದೆ ನಮ್ಮ ಮಕ್ಕಳು ನೆನೆಸಿಕೊಳ್ಳುವಾಗ ಅವರ ಸ್ಮರಣೆಯಲ್ಲಿ ಏನು ಉಳಿದಿರಬಹುದು ಎನ್ನುವ ಕುತೂಹಲ ನನ್ನನ್ನು ಇತ್ತೀಚೆಗೆ ತುಂಬಾ ಕಾಡುತ್ತಿದೆ. ಹೋದ ವರ್ಷಕ್ಕೂ ಮೊದಲು ನಮ್ಮ ಮಕ್ಕಳು ಮೊಬೈಲು, ಲ್ಯಾಪ್ ಟಾಪ್ ನೋಡುತ್ತಾ ಹೆಚ್ಚು ಸಮಯ ಕಳೆದರೆ ಎಷ್ಟೋ ತಂದೆತಾಯಂದಿರು ಮಕ್ಕಳನ್ನು ಬೈಯುತ್ತಾ, ಚಿಂತೆ/ ಆತಂಕ ಪಡುತ್ತಾ ಕಾಲ ಕಳೆದಿದ್ದಾರೆ. ಆದರೆ ಕಳೆದ ವರ್ಷದಿಂದ ಶುರುವಾದ ಮೊಬೈಲ್/ಟ್ಯಾಬ್/ಲ್ಯಾಪ್ ಟಾಪ್ ಸಂಗ ಸದ್ಯಕ್ಕೇನೂ ಮುಗಿಯುವ ಹಾಗೆ ಕಾಣುತ್ತಿಲ್ಲ.

ನಾವು ಮಕ್ಕಳಿಗೆ ಇಲ್ಲಿಯ ತನಕ ಏನನ್ನು ಮಾಡಬೇಡ ಅಂತ ಹೇಳುತ್ತಿದ್ದೆವೋ ಅದೆಲ್ಲವೂ ಈಗ ತಲೆಕೆಳಗಾಗಿ ನಿಂತಿದೆ. ಹೆಚ್ಚು ಗ್ಯಾಜೆಟ್ ಬಳಸಬೇಡಿ ಅಂತ ಖಚಿತವಾಗಿ ಹೇಳುವ ಹೊತ್ತಿಗೆ ಇವೆಲ್ಲವೂ ಶಿಕ್ಷಣದ ಏಕೈಕ ಅನಿವಾರ್ಯ ಮಾಧ್ಯಮವಾಗಿ ನಿಂತಿವೆ. ಮೊಬೈಲ್ ನೋಡುತ್ತಾ ಊಟ ಮಾಡುತ್ತಿದ್ದ ಮಕ್ಕಳೀಗ ಅದರಲ್ಲೇ ಪಾಠ ಕೂಡ ಓದುವಂತಾಗಿ ಅದರ ನಿಯಮಿತ ಬಳಕೆ ಎನ್ನುವುದು ಒಂದು ವಿಚಿತ್ರ ಸಂಗತಿಯಾಗಿದೆ.

ಇದರ ಅರ್ಥ ನಾವೀಗ ಮಕ್ಕಳ ಮುಂದೆ ವ್ಯತಿರಿಕ್ತ ನಡವಳಿಕೆ ತೋರುತ್ತಿದ್ದೇವೆ. ಅದನ್ನು ಮಕ್ಕಳು ಗಮನಿಸುತ್ತಲೂ ಇದ್ದಾರೆ. ಇದು ಅನಿವಾರ್ಯ ಆಗುವ ಹೊತ್ತಿಗೆ ನಾವು ಪ್ರಯೋಗಾತ್ಮಕ ನೆಲೆಯಲ್ಲಿ ಸೂಕ್ತ ನಡವಳಿಕೆ ರೂಪಿಸಿಕೊಳ್ಳಬೇಕಿದೆ. ಇದಕ್ಕೆ ಶೈಕ್ಷಣಿಕ ರೂಪುರೇಷೆಗಳನ್ನು ಮತ್ತೆ ಒರೆಗೆ ಹಚ್ಚಿ ನೋಡಬೇಕಿದೆ. ಬರೀ ಕ್ಲಾಸ್ ರೂಂ ವಿಧಾನ ಈಗ ಅಷ್ಟು ಹೆಚ್ಚು ಉಪಯೋಗ ಆಗಲಾರದು ಎನ್ನುವುದು ಸರ್ವವಿದಿತವಾದ ಸಂಗತಿ. ಮನೆಯಲ್ಲೇ ಕೂತು ಪಾಠ ಕೇಳುವುದರಿಂದ ಮಕ್ಕಳಿಗೆ ಸಾಕಷ್ಟು ಸಮಯ ಸಿಗಬಹುದು. ಆಗ ಮತ್ತೊಂದು ಸ್ಕ್ರೀನ್ ಮುಂದೆ ಕೂರಿಸದೆ ಸ್ವಲ್ಪಮಟ್ಟಿಗಾದರೂ ಹೊರಾಂಗಣ ಆಟ ಆಡಲು ಬಿಡುವ ಅನುಕೂಲ ಇದ್ದರೆ (ಮಾತ್ರ) ಅದನ್ನು ಸದುಪಯೋಗ ಪಡಿಸಿಕೊಳ್ಳುವುದು ಒಳಿತು.

ಈಗಿನ ಪೇರೆಂಟಿಂಗ್ ಅಂದರೆ, ಪೋಷಕತ್ವದ ಸವಾಲು ಎಂದರೆ ತೀರಾ ಮಕ್ಕಳ ಮೇಲೆ ಫೋಕಸ್ ಮಾಡುವುದು, ಅವರಿಗೆ ಒಂದು ಕ್ಷಣವೂ ಬೋರಾಗದ ಹಾಗೆ ನೋಡಿಕೊಳ್ಳುವುದು ನಮ್ಮ ಜನ್ಮಸಿದ್ಧ ಕಾಯಕ ಎಂಬಂತೆ ಪ್ರಯತ್ನ ಮಾಡುತ್ತಾ, ಆಗಾಗ ಸೋಲುತ್ತಾ, ಹಳಹಳಿಸಿಕೊಳ್ಳುತ್ತಾ ಇರುವುದು. ಅಥವಾ ಅವರ ಕ್ಲಾಸ್ ನಡೆಯುವಾಗ ಇಣುಕುವುದು, ಕೇಳಿಸಿಕೊಳ್ಳುವುದು, ಅವರಿಗೆ ಮುಜುಗರ ಆಗುವಷ್ಟು ತಲೆ ತೂರಿಸಿ ಟೀಚರುಗಳ ಬಗ್ಗೆ ಕಾಮೆಂಟ್ ಮಾಡುವುದು, ಹೊರಗಿನ ಜಗತ್ತಿನ ಬಗ್ಗೆ ಅಸಹಾಯಕತೆ ತೋರುವುದು ಇತ್ಯಾದಿ.

ಪೋಷಕರು ಇಂತಹ ನಡವಳಿಕೆಗಳನ್ನು ಬದಲಾಯಿಸಿಕೊಳ್ಳಬೇಕು. ಮಕ್ಕಳಿಗೆ ಬೋರಾದರೆ ಅವರೇನೋ ಸೃಜನಶೀಲ ಕೆಲಸದ ಕಡೆ ಸಹಜವಾಗಿ ಹೊರಳಲು ಬಿಡಿ. ಕೂತು ಬರೀ ಕಣ್ಣಿಗೆ ಕೆಲಸ ಕೊಡುವ ಟೀವಿಯನ್ನು ದೂರ ಇಡಿ. ಮಕ್ಕಳಿಗೆ ಅವರದೊಂದು ಜಗತ್ತು ರೂಪಿಸಿಕೊಳ್ಳಲು ಪ್ರೋತ್ಸಾಹಿಸಿ, ಆದರೆ ಸತತ ಒತ್ತಡ ಹೇರಬೇಡಿ.

ಇದು ನಾವ್ಯಾರೂ ಹಿಂದೆ ಕಂಡು ಕೇಳರಿಯದ ಕಾಲ/ಸಮಸ್ಯೆ. ಇದನ್ನು ಮಕ್ಕಳ ಜೊತೆಗೇ ದಾಟಬೇಕಿದೆ. ನಾವ್ಯಾರೂ ಸರ್ವಜ್ಞರಲ್ಲ. ಮುಂದೆ ಸೃಷ್ಟಿಯಾಗುವ ಅವಕಾಶಗಳ ಬಗ್ಗೆ, ಬದಲಾಗುವ ಜಗತ್ತಿನ ಬಗ್ಗೆ ನಮಗಿಂತ ಮಕ್ಕಳಿಗೆ ಹೆಚ್ಚು ಜ್ಞಾನ ಇರುತ್ತದೆ. ಅದನ್ನ ನಾವು 'ನೋಡಿ' ತಿಳಿದುಕೊಳ್ಳಬೇಕಿದೆ. ಮಕ್ಕಳನ್ನು ಅವರಂತೆ ಒಪ್ಪಿಕೊಳ್ಳಬೇಕಿದೆ.